ಓಎಸ್ 07/2023

ಪಿಡಬ್ಲ್ಯೂ 2

**ಸಾಕ್ಷಿಯು ದಿಃ 19.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ**

ಈ ದಾವೆಯನ್ನು ವಾದಿ ಕರುಣಾಕರನ್ ರವರು ಜನಾರ್ಧನ್ ರವರ ಹೆಂಡತಿಯ ವಿರುದ್ದ ಅವರ ಆಸ್ತಿಗೆ ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ದಾಖಲಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಜಮೀನುಗಳ ವ್ಯವಹಾರ ಗೊತ್ತಾ ಎಂದರೆ ಸಾಕ್ಷಿಯು ಅವರ ಜಮೀನಿನ ಪಕ್ಕದಲ್ಲಿಯೇ ನನಗೂ ಜಮೀನು ಇದ್ದು ಗೊತ್ತಿದೆ ಎಂದು ನುಡಿಯುತ್ತಾರೆ. ವಾದಿ ಮತ್ತು 1ನೇ ಪ್ರತಿವಾದಿಯ ಗಂಡನ ನಡುವೆ ವಿಭಾಗವಾಗಿರುತ್ತದೆ. ಸದರಿ ವಿಭಾಗ ಪತ್ರದಂತೆ ಅವರವರ ಹಿಸ್ಸೆಯ ಜಮೀನನ್ನು ಅವರವರು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಯಾವ ಯಾವ ಸರ್ವೇ ನಂಬರ್ ನಲ್ಲಿ ಯಾರ್ಯಾರು ಉಳುಮೆ ಮಾಡುತ್ತಿದ್ದಾರೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿಯು ವಾದಿಯು ನಮ್ಮ ಪಕ್ಕದಲ್ಲಿ 3 ½ ಎಕರೆ ಜಮೀನು ಉಳುಮೆ ಮಾಡುತ್ತಿದ್ದು ಸರ್ವೇ ನಂಬರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಸಹ ಅದರ ಪಕ್ಕದಲ್ಲಿಯೇ ಜಮೀನು ಇದ್ದು ಬೇಸಾಯ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ತಮ್ಮ ಜಮೀನುಗಳನ್ನು ಅಳತೆ ಮಾಡಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಕರುಣಾಕರನ್ ರವರ ಮನೆ ಸಂಖ್ಯೆ 663 ಆಗಿರುತ್ತದೆ ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಮನೆಯು ಸಹ ವಿಭಾಗ ಪತ್ರದಂತೆ ವಾದಿ ಕರುಣಾಕರ್ ರವರಿಗೆ ಬಂದಿರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ನೋಡಿಲ್ಲ. ಸದರಿ ವಿಭಾಗ ಪತ್ರದಲ್ಲಿ ವಾದಿ ಮತ್ತು 1ನೇ ಪ್ರತಿವಾದಿಯ ಗಂಡ ಜನಾರ್ಧನ್ ರವರ ಮನೆಗೆ ಓಡಾಡಲು 6 ½ ಅಡಿ ಅಗಲದ ಗಲ್ಲಿ ಬಿಟ್ಟಿರುವುದಾಗಿ ನಮೂದಿದೆ ಎಂದರೆ ಸರಿಯಲ್ಲ. ವಾದಿ ಕರುಣಾಕರನ್ ರವರ ಮನೆಯ ಉತ್ತರಕ್ಕೆ 1ನೇ ಪ್ರತಿವಾದಿಯ ಗಂಡ ಜನಾರ್ಧನ್ ರವರ ಮನೆ ಇದೆ ಎಂದರೆ ಸರಿ. ವಾದಿ ಕರುಣಾಕರನ್ ರವರ ಮನೆಯ ಪಶ್ಚಿಮಕ್ಕೆ 6 ½ ಅಡಿ ಗಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಕರುಣಾಕರನ್ ರವರ ಮನೆಯ ಪಶ್ಚಿಮಕ್ಕೆ ಗಲ್ಲಿಯಾದ

ನಂತರ ಖಾಲಿ ನಿವೇಶನ ಇದ್ದು ಸದರಿ ನಿವೇಶನದ ದಕ್ಷಿಣ ಭಾಗ ವಾದಿಯ ಹಿಸ್ಸೆಗೆ ಉತ್ತರದ ಭಾಗ 1ನೇ ಪ್ರತಿವಾದಿಯ ಗಂಡ ಜನಾರ್ಧನ್ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ.

2. ನಿಡಿ 1 ಫೋಟೋದಲ್ಲಿ ಕಾಣುವ ಕಬ್ಬಿಣದ ಗೇಟ್ ನ್ನು ವಾದಿಯು ಹಾಕಿಸಿರುತ್ತಾರೆ. ನಿಡಿ 1 ಫೋಟೋದಲ್ಲಿ ಕಾಣುವ ಗೇಟ್ ಮೂಲಕವೇ 1ನೇ ಪ್ರತಿವಾದಿಯ ಗಂಡನ ಹಿಸ್ಸೆಗೆ ಬಂದಿರುವ ಮನೆ ಮತ್ತು ನಿವೇಶನಕ್ಕೆ ಹಾದು ಹೋಗಬೇಕು ಎಂದರೆ ಸರಿ. ಈ ವಿಚಾರವಾಗಿ 1ನೇ ಪ್ರತಿವಾದಿಯು ಪೊಲೀಸರಿಗೆ ದೂರು ನೀಡಿದ್ದರು ಎಂದರೆ ಸಾಕ್ಷಿಯು ವಾದಿ ಮತ್ತು 1ನೇ ಪ್ರತಿವಾದಿ ಇಬ್ಬರೂ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 1 ಫೋಟೋದಲ್ಲಿ ಕಾಣುವ ಕಬ್ಬಿಣದ ಗೇಟ್ ನ್ನು ವಾದಿಯು ಹಾಕಿರುವುದರಿಂದ 1ನೇ ಪ್ರತಿವಾದಿಯು ವಾದಿಯ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು ಎಂದರೆ ಸರಿ. ವಾದಿಗೆ ಯಾವುದೇ ತೊಂದರೆಯಾಗಿಲ್ಲ, 1ನೇ ಪ್ರತಿವಾದಿಗೆ ತೊಂದರೆಯಾಗಿದೆ ಎಂದರೆ ಸರಿಯಲ್ಲ. 1 ರಿಂದ 3ನೇ ಪ್ರತಿವಾದಿಗಳು ಸುಮಾರು 5-6 ವರ್ಷಗಳಿಂದ ಕೊಯಮತ್ತುರ್ ನಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಾನು ಹೇಳುವಂತ ವಾದಿಗೆ ಯಾವುದೇ ತೊಂದರೆಯಾಗಿಲ್ಲ ಮತ್ತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ